**ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.**

ಜಿಲ್ಲಾ ಮಟ್ಟದ ಕಛೇರಿಗಳ ಸಂಕೀರ್ಣ ಕಟ್ಟಡ, ಕೊಠಡಿ ಸಂಖ್ಯೆ: 21-28, 2ನೇ ಮಹಡಿ, ಸಿದ್ಧಾರ್ಥನಗರ, ಮೈಸೂರು-570011

E-mail- dobcmmysore1@gmail.com ☎0821-2342917


ಸಂಖ್ಯೆ: ಹಿಂವಕಇ-08/ಪಿಹೆಚ್.ಡಿ/ಸಿಆರ್-16/2020-21 ದಿನಾಂಕ:01-03-2021

ಗೆ,

ಕುಲಸಚಿವರು,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಕುಲಸಚಿವರು,
ಜೆ.ಎಸ್.ಎಸ್. ವಿಶ್ವವಿದ್ಯಾನಿಲಯ, ಮೈಸೂರು.

ಕುಲಸಚಿವರು,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

02/03/2021.

ಮಾನ್ಯರೆ,

**ವಿಷಯ:-** 2020-21ನೇ ಸಾಲಿನಲ್ಲಿ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಅರ್ಹ **ನವೀಕರಣ ವಿದ್ಯಾರ್ಥಿಗಳಿಗೆ** ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಕುರಿತು.

ಉಲ್ಲೇಖ:- ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ಪತ್ರಸಂಖ್ಯೆ: ಹಿಂವಕಇ/ತರಬೇತಿ-1/ಪಿಹೆಚ್.ಡಿ/ಸಿಆರ್-1/2019-20 ದಿ:25.02.2021.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ 2020-21ನೇ ಸಾಲಿನಲ್ಲಿ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಅರ್ಹ **ನವೀಕರಣ ವಿದ್ಯಾರ್ಥಿಗಳಿಗೆ** ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್ ನೀಡಲು ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರುರವರು ಪ್ರಕಟಣೆ ಹೊರಡಿಸಿರುತ್ತಾರೆ. ಈ ಪತ್ರದೊಂದಿಗೆ ಲಗತ್ತಿಸಿರುವ ಪ್ರಕಟಣೆಯನ್ನು ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಗಮನಕ್ಕಾಗಿ ತಮ್ಮ ಕಛೇರಿಯ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕೋರಿದೆ.

ತಮ್ಮ ವಿಶ್ವಾಸಿ,

Bindhya H.S.

ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಮೈಸೂರು ಜಿಲ್ಲೆ, ಮೈಸೂರು.

03/03/2021.

Registrar Personal RP 1238 Dt. 2/3/21

OBC cell
to circulate.

**ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ,**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.**

ಜಿಲ್ಲಾ ಮಟ್ಟದ ಕಛೇರಿಗಳ ಸಂಕೀರ್ಣ ಕಟ್ಟಡ, ಕೊಠಡಿ ಸಂಖ್ಯೆ: 21-28, 2ನೇ ಮಹಡಿ, ಸಿದ್ಧಾರ್ಥನಗರ, ಮೈಸೂರು-570011

# ಪ್ರಕಟಣೆ

ನಂ.ಹಿಂವಕಇ-08/ಪಿಹೆಚ್.ಡಿ/ಸಿಆರ್-16/2020-21, ದಿನಾಂಕ:01.03.2021.

## 2020-21ನೇ ಸಾಲಿನಲ್ಲಿ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ನವೀಕರಣ ವಿದ್ಯಾರ್ಥಿಗಳಿಂದ ಇಲಾಖೆ ನೀಡುವ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್ ಮಂಜೂರಾತಿಗಾಗಿ ಅರ್ಜಿ ಆಹ್ವಾನ

1. ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ನವೀಕರಣ ವಿದ್ಯಾರ್ಥಿಗಳಿಂದ ಇಲಾಖೆ ನೀಡುವ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ 2020-21ನೇ ಸಾಲಿನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಈ ಹಿಂದಿನ ಸಾಲುಗಳಲ್ಲಿ ಇಲಾಖೆಯಿಂದ ನೀಡುವ ಪಿಹೆಚ್.ಡಿ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಿ, ಸದರಿ ಕಾರ್ಯಕ್ರಮದಡಿ ಆಯ್ಕೆಯಾಗಿದ್ದು, 2020-21ನೇ ಸಾಲಿನಲ್ಲಿ **ಅರ್ಹವಿರುವ ನವೀಕರಣ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.**
3. ಆರ್ಥಿಕ ವರ್ಷಾಂತ್ಯವಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಮತ್ತು ಅರ್ಜಿ ಸಲ್ಲಿಸುವ ಕಾರ್ಯವನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಮೂಲಕವೇ ನಡೆಸಲು ಕ್ರಮವಹಿಸಲಾಗುತ್ತಿದೆ.
4. ಆದ್ದರಿಂದ ಅರ್ಹ ನವೀಕರಣ ವಿದ್ಯಾರ್ಥಿಗಳು ಈ ಕೆಳಕಂಡ ಮೂಲ ದಾಖಲೆಗಳು ಮತ್ತು ಒಂದು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಯೊಂದಿಗೆ ಮೈಸೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಭೇಟಿ ನೀಡಿ ಮೂಲ ದಾಖಲೆಗಳ ಪರಿಶೀಲನೆ ಮಾಡಿಸಿಕೊಳ್ಳುವುದು. ದಾಖಲೆಗಳ ಪರಿಶೀಲನೆ ನಂತರ ತಮ್ಮ ಮೂಲ ದಾಖಲೆಗಳನ್ನು ಹಿಂಪಡೆಯುವುದು ಮತ್ತು ಒಂದು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು(ಬ್ಯಾಂಕ್ ಖಾತೆ ವಿವರದ ಮ್ಯಾಂಡೇಟ್ ಫಾರ್ಮ್ ಅನ್ನು ಮಾತ್ರ ಮೂಲ ಪ್ರತಿಯಲ್ಲಿ ಸಲ್ಲಿಸುವುದು). ವಿದ್ಯಾರ್ಥಿ ಸಲ್ಲಿಸಬೇಕಾದ ದಾಖಲೆಗಳು-
   - ಹಿಂದಿನ ಸಾಲಿನ ಪ್ರಗತಿ ವರದಿ.
   - ಪಿಹೆಚ್.ಡಿ ಅಧ್ಯಯನ ಮುಂದುವರೆಸಲು 2020-21ನೇ ಸಾಲಿನಲ್ಲಿ ವಿಶ್ವವಿದ್ಯಾಲಯ/ಕಾಲೇಜಿನಲ್ಲಿ ದಾಖಲಾತಿ ಪಡೆದಿರುವ ಬಗ್ಗೆ ದಾಖಲೆ.
   - ಆಧಾರ್ ಕಾರ್ಡ್.
   - ಆಧಾರ್ ಸಂಖ್ಯೆ ಅಟ್ಯಾಚ್ ಆಗಿರುವ ಬ್ಯಾಂಕ್ ಖಾತೆ ವಿವರ.
   - ಬ್ಯಾಂಕ್ ಖಾತೆ ವಿವರದ ಮ್ಯಾಂಡೇಟ್ ಫಾರ್ಮ್ (ನಮೂನೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ).

**ಹೆಚ್ಚಿನ ವಿವರಗಳಿಗಾಗಿ:**

**ಇಲಾಖಾ ವೆಬ್ ಸೈಟ್** www.backwardclasses.kar.nic.inನ್ನು **ನೋಡುವುದು.**

**ಸಹಾಯವಾಣಿ:-8050770004**

(ಕಛೇರಿ ಕಾರ್ಯನಿರ್ವಹಿಸುವ ದಿನಗಳು ಮತ್ತು ಸಮಯದಲ್ಲಿ ಮಾತ್ರ ಬೆಳಿಗ್ಗೆ 10.00 ರಿಂದ 5.30ರವರೆಗೆ ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ)

ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಮೈಸೂರು ಜಿಲ್ಲೆ, ಮೈಸೂರು.